

ಬ್ಯಾಂಡ್ ಸೆಟ್ ಹಾಗೂ ಫೋಡಿವಾಲಾ ಅಂಗಡಿಗಳಿಗೆ ಈ ವರ್ಷ ಕೆಲಸವೇ ಇಲ್ಲವಾಗಿದೆ. ವಾದ್ಯಗಳೆಲ್ಲ ಧ್ವನಿ ಕಳೆದುಕೊಂಡಿವೆ

**ಮದುವೆ ಸರಳವಾಗಿರಬೇಕು ಎನ್ನುವುದು ಆದರ್ಶ. ಅದ್ದೂರಿಯಾಗಿ ಮಾಡಿದರೆ ಅನೇಕರಿಗೆ ಉದ್ಯೋಗಗಳು ದೊರೆಯುತ್ತವೆ ಎನ್ನುವುದೂ ಸತ್ಯ. ಶ್ರೀಮಂತರ ಹಣದ ಹರಿವಿಗೆ ಅವು ವೇದಿಕೆ ಆಗುತ್ತವೆ. ಅಂಥ ಸಂದರ್ಭಗಳಲ್ಲಿ ಅದ್ದೂರಿತನ ಸಹನೀಯ. ಆರ್ಥಿಕವಾಗಿ ಸಬಲರಲ್ಲದವರು ಪೊಳ್ಳು ಪ್ರತಿಷ್ಠೆಗೆ ಒಳಗಾಗಿ ಮದುವೆ ನೆಪದಲ್ಲಿ ಸಾಲದ ಶೂಲಕ್ಕೆ ಸಿಲುಕದಿರುವುದು ವಿವೇಕ.**



ನೀಡಿವೆ. ಎರಡು ತಿಂಗಳು ಸಂಪೂರ್ಣವಾಗಿ ಕೆಲಸ ನಿಲ್ಲಿಸಿದ್ದು ಜ್ಯುವೆಲ್ಲರಿ ಉದ್ಯಮವನ್ನು ಸಾಕಷ್ಟು ಬಾಧಿಸಿದೆ. ಈ ಮಧ್ಯೆ ಚಿನ್ನದ ಬೆಲೆ ಗಗನಮುಖಿಯಾಗಿ ನೆಗೆಯುತ್ತಾ ಹೊರಟಿರುವುದು ಎಲ್ಲಿ ಜನರ ಖರೀದಿ ಆಸಕ್ತಿಯನ್ನೇ ಕುಗ್ಗಿಸುವುದೋ ಎನ್ನುವ ಭೀತಿಗೆ ಕಾರಣವಾಗಿದೆ. ನವದೆಹಲಿಯ ತರುಣ್ ತಹಿಲ್ಯೆನಿಯಂತಹ ಹೆಸರಾಂತ ವಿನ್ಯಾಸಕರು ಮಾತ್ರ ಆಭರಣಗಳ ವಹಿವಾಟಿನಲ್ಲಿ ಏರುಪೇರು ಆಗದಂತೆ ನೋಡಿಕೊಳ್ಳಲು ತಂತ್ರಜ್ಞಾನದ ಮೊರೆ ಹೋಗಿದ್ದಾರೆ. ಜಾಗತಿಕ ಮಾರುಕಟ್ಟೆಯನ್ನೂ ಕಂಡುಕೊಳ್ಳುತ್ತಿದ್ದಾರೆ. ಆಭರಣಗಳಿಗೆ ಎಂದಿಗೂ ಬೇಡಿಕೆ ಕಡಿಮೆ ಆಗುವುದಿಲ್ಲ ಎನ್ನುವ ನಂಬಿಕೆಯಲ್ಲಿ ಅವರಿದ್ದಾರೆ.

ವಧುಗಳಿಗೆ ಬೇಕಾದಂತಹ ಬಟ್ಟೆಗಳನ್ನೇ ಸಿದ್ಧಪಡಿಸಿಕೊಡುವ ವಿಶೇಷ ಮಳಿಗೆಗಳಿವೆ. ಅಲ್ಲಿ ವಧುವಿಗೆ ತಕ್ಕಂತೆ ವಿಶೇಷ ವಸ್ತ್ರ ವಿನ್ಯಾಸದ ಬಟ್ಟೆ ಖರೀದಿಗೆ ಲಕ್ಷಾಂತರ ರೂಪಾಯಿ ವ್ಯಯಿಸಬೇಕಾಗುತ್ತದೆ. ಕುಶಲಕರ್ಮಿಗಳ ತಂಡವೇ ಇಂತಹ ವಸ್ತ್ರಗಳನ್ನು ಸಿದ್ಧಪಡಿಸಲು ಸನ್ನದ್ಧವಾಗಿ ನಿಂತಿರುತ್ತದೆ. ಈ ಮೊದಲು, ಇಂತಹ ಮಳಿಗೆಗಳಲ್ಲಿ ‘ಆರ್ಡರ್’ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದರೂ ಜನ ದುಂಬಾಲು ಬಿದ್ದು, ಸರದಿಯಲ್ಲಿ ನಿಲ್ಲುತ್ತಿದ್ದರು. ಈಗ ‘ಆರ್ಡರ್’ ತೆಗೆದುಕೊಳ್ಳಲು ಮಳಿಗೆಗಳಲ್ಲಿ ಕಾರ್ಮಿಕರು ಸಾಲುಗಟ್ಟಿ ನಿಲ್ಲುತ್ತಿದ್ದಾರೆ. ಆದರೆ, ಕೊಡುವವರ ಸುಳಿವೇ ಇಲ್ಲ.

ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯವು ಕೆಲವು ವರ್ಷಗಳ ಹಿಂದೆ ಆಹಾರ ಪದಾರ್ಥಗಳು ವ್ಯರ್ಥವಾಗಿ ತ್ಯಾಜ್ಯದ ಪಾಲಾಗುತ್ತಿರುವ ಸಂಬಂಧ ಸಮೀಕ್ಷೆಯೊಂದನ್ನು ನಡೆಸಿತ್ತು. ಮದುವೆ ಸಮಾರಂಭಗಳಲ್ಲಿ ಶೇ 20ರಷ್ಟು ಆಹಾರ ಹಾಳಾಗುತ್ತಿದೆ ಎಂದು ಸಮೀಕ್ಷಾ ವರದಿಯಲ್ಲಿ ಅಭಿಪ್ರಾಯಪಡಲಾಗಿತ್ತು. ದೇಶದಲ್ಲಿ ಪ್ರತಿವರ್ಷ ಸರಾಸರಿ 1.20 ಕೋಟಿ ಮದುವೆಗಳು ನಡೆಯುತ್ತವೆ ಎನ್ನುವ ಅಂದಾಜಿದೆ. ಈ ಮದುವೆಗಳಲ್ಲಿ ಲಕ್ಷಾಂತರ ಟನ್‌ಗಳಷ್ಟು ಅಮೂಲ್ಯ ಆಹಾರ ತ್ಯಾಜ್ಯದ ಪಾಲಾಗುತ್ತಿರುವುದು ನೋವಿನ ಸಂಗತಿ. ಉದ್ಯೋಗವನ್ನು ಕಳೆದಿರುವ, ಆದಾಯದ ಮಾರ್ಗವನ್ನೇ ಬಂದ್ ಮಾಡಿರುವ, ಅನಾರೋಗ್ಯದಿಂದ ಬಳಲುವವರು ಸುಲಭವಾಗಿ ಚಿಕಿತ್ಸೆಯನ್ನೂ ಪಡೆಯಲಾಗದಿರುವ ಈ ಸಂದರ್ಭ, ವೈಭವದ ಮದುವೆಗಳನ್ನು ನಡೆಸುವ ಮೂಡ್‌ನಲ್ಲಿದ್ದವರು ಮರುಚಿಂತಿಸಬೇಕಾದ ಕಾಲವೂ ಹೌದು. ಮದುವೆ ಸೇರಿದಂತೆ ಎಲ್ಲ ವಿಷಯಗಳಲ್ಲೂ ಸರಳತೆಯನ್ನು ರೂಢಿಸಿಕೊಳ್ಳಿ ಎನ್ನುವುದೇ ಕೊರೊನಾ ತಂದಿಟ್ಟ ಸಂಕಷ್ಟಗಳ ಸಂದೇಶ ಆಗಿರಬಹುದು. ಸಹಜ ಮಾರ್ಗದ ದಾರಿಯನ್ನೇ ತುಳಿಯಿರಿ ಎಂದು ಕಿವಿಮಾತನ್ನೂ ಅದು ಹೇಳುತ್ತಿರಬಹುದು. ಕಿವಿಗೊಡದಿದ್ದರೆ ನಮ್ಮ ಕಾಲಮೇಲೆ ನಾವೇ ಕಲ್ಲು ಹಾಕಿಕೊಂಡಂತೆ ಅಷ್ಟೆ!

ಪ್ರತಿಕ್ರಿಯಿಸಿ: feedback@sudha.co.in